ಹೋಗುತ್ತಿದ್ದ. ಮಗನಿದ್ದಾನೆ ಅನ್ನುವ ಅನಿಸಿಕೆಯೇ ಆಕೆಯ ಬದುಕಿನ ಊರುಗೋಲಾಗಿತ್ತು. ಆಕೆ ನಮ್ಮ ಮನೆಗೆ ಬಂದಾಗ ಸೀರೆಗಂಟಿನಲ್ಲಿ ನಮಗಾಗಿ ಒಂದಿಷ್ಟು ಹಸಿ ಅಥವಾ ಹುರಿದ ಗೇರುಬೀಜ ಇದ್ದೇ ಇರುತ್ತಿತ್ತು. ಕಟ್ಟಿತಂದ ಎಳೆಯ ಉಪ್ಪಳಿಗೆ ಎಲೆಯ ತಿಳಿಹಸಿರು ಬೀಜದೆಣ್ಣೆಯ ಲೇಪದಿಂದ ಫಳಫಳನೆ ಹೊಳೆಯುತ್ತಿತ್ತು. ಮಧ್ಯಾಹ್ನದ ಊಟ, ಚಿಕ್ಕದೊಂದು ನಿದ್ದೆಯೂ ಆಗಿ ಎದ್ದು ಹೊರಟಾಗ ಅಮ್ಮ ನಿಶ್ಚಯವಾಗಿ ಕೊಡುವ ಬೆಲ್ಲದ ಚಹಾ, ಜತೆಗೆ ಒಂದು ತುಂಡು ಹೊಗೆಸೊಪ್ಪು, ನಾಲ್ಕಾರು ಅಡಿಕೆ, ಅಡಕೆ ಹಾಳೆಯಲ್ಲಿ ಕಟ್ಟಿದ ಮಿಡಿ ಉಪ್ಪಿನಕಾಯಿ, ಹಲಸಿನ ಬೀಜ, ಉಪ್ಪಿನ ಸೊಳೆ ಇತ್ಯಾದಿಗಳನ್ನು ಹೊಂದಿಸಿ ಹೊರಗಿಡುತ್ತಿದ್ದಳು. ತನ್ನ ಬುಟ್ಟಿಯಲ್ಲಿ ಎಲ್ಲವನ್ನೂ ಒಪ್ಪವಾಗಿ ಬಾಯಮ್ಮ ಸೇರಿಸಿಡುವುದನ್ನು ನೋಡುವ ಕುತೂಹಲ ನಮಗಿರುತ್ತಿತ್ತು. ಅದನ್ನವಳ ತಲೆಗೇರಿಸಲು ನಾವಿಬ್ಬರೂ ಪೈಪೋಟಿಯಿಂದ ಕಾದಿರುತ್ತಿದ್ದೆವು. ನಮ್ಮನ್ನು ಬೀಳ್ಕೊಂಡು ಬಾಗಿಲು ದಾಟುವಾಗ ಆಕೆಯೊಮ್ಮೆ ತಿರುಗಿ ನೋಡುತ್ತಿದ್ದಳು. ಆ ಮುದಿ ಮಬ್ಬು ಕಣ್ಣುಗಳ ತುಂಬ ಸನ್ಮನಸ್ಸಿನ ಸನ್ಮಂಗಳದ ಹಾರೈಕೆಗಳು ತುಂಬಿ ತುಳುಕಿರುತ್ತಿದ್ದವು! ಕಾಲದ ಗತಿ ನಿರ್ದಿಷ್ಟವಾಗಿರುವುದಿಲ್ಲ. ಇಷ್ಟೊಂದು ನಿರ್ದಯವಾಗಿರುವುದೇಕೆ? ಕಾರ್ಯ–ಕಾರಣಗಳು, ಪರಿಸ್ಥಿತಿ–ಪರಿಣಾಮಗಳು ನಮ್ಮ ಹತೋಟಿಯಲ್ಲಿಲ್ಲ. ಪರಿವರ್ತನೆ ಅಂದರೆ ಮನುಷ್ಯರ ನಡುವೆ ಎದ್ದುನಿಂತ ಗೋಡೆಗಳಾಗಿ ಹೋದವೆ? ಪರಸ್ಪರ ಸಂಬಂಧಗಳು ಶೂನ್ಯವಾಗಿ ನಿಂತ ಆ ಬಿಂದುವಿನಿಂದಲೆ ಮತ್ತೆ ನಮಗೆ ಹೊಸದಾಗಿ ತೊಡಗುವುದು ಅಸಾಧ್ಯವೆ?

ಹೊರಗೆ ಯಾರೋ ಮಾತಾಡಿದ ಸದ್ದು. ಎದ್ದು ಹೋಗಿ ನೋಡಿದಾಗ ಬಾಗಿಲಲ್ಲಿ ಎಲಿಸಾ ನಿಂತಿದ್ದಳು. ಅಣ್ಣನೇ ಹೊರಗಿದ್ದ. ಅದೇನೋ ಹೇಳಿಕೊಳ್ತಾ ತೀರ ದುಗುಡದಿಂದಿದ್ದಳು. ಹಿಂದೆ ನಮ್ಮಮ್ಮನಿಗೆ ಬಲಗೈಯಂತಿದ್ದಳು – ಆಮೇಲೆ ಒಮ್ಮೆಗೇ ಬರುವುದನ್ನೇ ನಿಲ್ಲಿಸಿದಾಗ ನಿರ್ವೇದ ವಿಷಾದವೊಂದು ನಿರಂತರವಾಗಿ ನನ್ನನ್ನು ನೋಯಿಸಿ ನಲುಗಿಸಿತ್ತು. ಅಣ್ಣನದೇ ವಯಸ್ಸು. ಆ ಕಾಲಕ್ಕೇ ಪಿ.ಯು.ಸಿ. ತನಕ ಓದಿದಾಕೆ. ಶತಕುಡುಕನಾದ ತಂದೆ ದೂಜಪುರ್ಬುವಲ್ಲದೆ ಬೇರೆ ಯಾರೂ ಬಂಧುಗಳಿರಲಿಲ್ಲ. ತಾಯಿಯಿಲ್ಲದ ಹುಡುಗಿ ಅಂತ ಅಮ್ಮನಿಗೆ ಅಳತೆಯಿಲ್ಲದ ಅನುಕಂಪ. ತನ್ನ ಅಭಾವಗಳನ್ನೆಲ್ಲ ಅಲ್ಲಗಳೆಯುವಂತೆ ಅನವರತ ಸಹತಾಪ. ಶಾಲೆಯ ಹೊತ್ತಿಗೆ ಬಂದು ಅಲ್ಲಿ ಇಲ್ಲಿ ಚೆಲ್ಲಾಡಿರುವ ಪುಸ್ತಕಗಳನ್ನೆಲ್ಲ ಹುಡುಕಿ ಚೀಲಕ್ಕೆ ತುಂಬಿಸಿ ಎಲಿಸಾ ನನ್ನ ಕೈಹಿಡಿದು ಕರೆದೊಯ್ಯುತ್ತಿದ್ದಳು. ಅಣ್ಣ ಹಿಂಬಾಲಿಸಿ ಬರುತ್ತಿದ್ದ. ತೀರ ಚುರುಕಾಗಿ ಓಡಾಡುವುದು ಮತ್ತು ಯಾವಾಗಲೂ ನಿಷ್ಕಳಂಕವಾಗಿ ನಗುತ್ತಿರುವುದು ಅವಳ ಸ್ವಭಾವದಲ್ಲಿ ಸಹಜವಾಗಿತ್ತು. ದಾರಿಯುದ್ದಕ್ಕೂ ನಮ್ಮದು ಲವಲವಿಕೆಯ ಮಾತಿನ ಮಂಟಪ. ಅಣ್ಣ ಗಂಭೀರವಾಗಿದ್ದು ಅನಿವಾರ್ಯವಾದರೆ ಒಂದಿಷ್ಟೇ ನಗುತ್ತಿದ್ದ. ಅಷ್ಟೂ ವರ್ಷಗಳು ಸಮಸ್ಯೆಗಳ ಸುಳಿವಿಲ್ಲದೆ ಕಳೆದಿದ್ದುವು. ಆಮೇಲೆ ಒಮ್ಮೆಗೇ ನಮ್ಮ ಮನೆಗೆ ಬರುವುದನ್ನು ನಿಲ್ಲಿಸಿದ ತಿಂಗಳೊಳಗೇ ಆಕೆಯ ಮದುವೆಯಾಗಿತ್ತು. ಚರ್ಚಿನಿಂದ ಹೊರಟ ಮದುವೆ ದಿಬ್ಬಣ ನಮ್ಮ ಮನೆಯಂಗಳಕ್ಕೇ ಬಂದಾಗ ಅಚ್ಚರಿಯೊಂದಿಗೆ ಭಾರೀ ಸಂಭ್ರಮವಾಯ್ತು. ಅಣ್ಣ ಹೊರಗೆ ಬರಲೇ ಇಲ್ಲ. ಅಪ್ಪ ಒಂದೆರಡು ಮಾತಾಡಿ ತಮ್ಮ ದೈನಂದಿನ ಪೂಜೆಯಲ್ಲಿ ತೊಡಗಿ ಕೂತಿದ್ರು. ಅಮ್ಮನೇ ಮುಂದೆ ನಿಂತು ಎಲ್ಲರನ್ನೂ ಮಾತಾಡಿಸಿ, ಚಾ–ತಿಂಡಿ ಕೊಟ್ಟು, ಎಲಿಸಾಗೊಂದು ಹೊಸಸೀರೆ–ಬಳೆಯೊಂದಿಗೆ ಹೂಮುಡಿಸಿ ಬಳಿಯಲ್ಲೇ ನಿಂತಿದ್ದಳು. ಎಲಿಸಾ ಅಮ್ಮನ ಕಾಲು ಮುಟ್ಟಿ ನಮಸ್ಕರಿಸಿ ಆಮೇಲೆ ಗಟ್ಟಿಯಾಗಿ ತಬ್ಬಿಹಿಡಿದು ಬಿಕ್ಕಿ ಬಿಕ್ಕಿ ಅತ್ತಾಗ ನನಗೂ ದುಃಖ ತಡೆಯದೆ ಅಳುವೇ ಬಂದಿತ್ತು. ಅವರೆಲ್ಲ ಹೊರಟು ಹೋದ ಮೇಲೆ ಬಹಳಹೊತ್ತಿನ ವರೆಗೂ ಅಮ್ಮ ಚಾವಡಿಯ ಬಾಜಿರಕಂಬಕ್ಕೊರಗಿ ಅದೇನು ಯೋಚಿಸುತ್ತಿದ್ದಳೋ– ಎಷ್ಟು ಕೇಳಿದರೂ ಏನೂ ಹೇಳಲಿಲ್ಲ. ತನ್ನ ಸ್ವಭಾವಕ್ಕೆ ಸಲ್ಲದ ರೀತಿಯಲ್ಲಿ ಎಲಿಸಾಳನ್ನು ನಮ್ಮ ಮನೆಯಿಂದ ಒಮ್ಮೆಗೇ ಹೊರಗಿಟ್ಟ